

ಹಿಮಾಲಯದಲ್ಲಿ ರಾತ್ರಿ ಆಕಾಶವನ್ನು ನೋಡುವುದು ಅತ್ಯಂತ ಸಂಭ್ರಮದ ಸಂಗತಿ. ತೊಳೆದು ದಬ್ಬಾಕಿರುವ ಬೋಗುಣಿಯಂತೆ ಕಾಣುವ ಆಕಾಶದ ತುಂಬ ತುಳುಕಿ ಉದುರುತ್ತಿವೆಯೇನೋ ಎನ್ನಿಸುವಷ್ಟು ಗಿಜಿಗುಟ್ಟುವ ನಕ್ಷತ್ರಗಳು! ಆ ಬೋಗುಣಿಯಲ್ಲಿ ನಾವೂ ತೇಲಿದಂಥ ಅನುಭವ. ಎಷ್ಟು ಹೊತ್ತು ಸಾಗಿದ್ದೆವೋ ಗೊತ್ತಾಗುತ್ತಿರಲಿಲ್ಲ. ಅತ್ಯಂತ ಕಿರಿದಾದ ಕೊರಕಲುಗಳ ಅಂಚುಗಳಲ್ಲಿ ಹೆಜ್ಜೆ ಹೆಜ್ಜೆಯನ್ನೂ ಧೇನಿಸಿ ಇಡುತ್ತ ಆ ಭಯಂಕರ ಚಳಿಯಲ್ಲೂ ಬುಸುಬುಸನೇ ಉಸಿರು ಬಿಡುತ್ತಾ ಸಾಗುತ್ತಿದ್ದೆವು. ಇದ್ದಕ್ಕಿದ್ದಂತೆ ಒಂದು ದಿಕ್ಕಿನಲ್ಲಿ ಬೆಳಕು ಹೆಚ್ಚಾದಂತೆ ಗೋಚರಿಸಿತು. ಸೂರ್ಯ ಹುಟ್ಟಲು ಡ್ರೆಸ್ ಮಾಡಿಕೊಳ್ಳುತ್ತಿದ್ದಾನೆ ಎಂಬುದು ಎಲ್ಲರಿಗೂ ಗೊತ್ತಾಗಿ 'ಹೋ' ಎಂದು ಅವನನ್ನು ಸ್ವಾಗತಿಸಲು ಸಜ್ಜಾದರು. ಸ್ವಲ್ಪ ಹೊತ್ತಿನಲ್ಲಿ ಬಿಳಿದಾದ ಹಾಸಿಗೆಗಳನ್ನು ಇಡೀ ಬೆಟ್ಟಕ್ಕೆ ಕವುಚಿದ್ದಾರೇನೋ ಎನ್ನುವಂತೆ ಹಿಮರಾಶಿ ನಮ್ಮ ಕಣ್ಣಿಗೂ ಕಾಲಿಗೂ ಗೋಚರಿಸಲಾರಂಭಿಸಿತು. ನಮ್ಮ ಎದುರಿಗೆ ಕೇದಾರಕಂಠ ಎಂಬ ಹೆಸರನ್ನು ಹೊತ್ತ ಬೃಹತ್ತಾದ ಶಿಖರ ಎದುರಿಗೆ ನಿಂತು ಕರೆಯುತ್ತಿತ್ತು. ಕೇದಾರಕಂಠ ಎಂಬ ಹೆಸರನ್ನೂ ಈ ಶಿಖರದ ಆಕಾರವನ್ನೂ ಹೊಂದಿಸಿ ನೋಡಲು ಪ್ರಯತ್ನಿಸಿದೆ. ಅನ್ನಿಸಿದ್ದನ್ನು ಎಲ್ಲರಲ್ಲಿ ಹಂಚಿಕೊಳ್ಳಲು ಸ್ವಲ್ಪ ಮುಜುಗರವಾಯಿತು.

## ಬೆಳ್ಳಿ ಬೆಟ್ಟದ ಮೇಲೆ

ಹಿಮದ ದಾರಿಯಗುಂಟ ಸಾಗುತ್ತ ಸಾಗುತ್ತ ಇನ್ನೇನು ಶಿಖರ ಮುಗಿಯಿತು ಎನ್ನುವಲ್ಲಿ ಮತ್ತೊಂದು ಗೋಚರವಾಗುತ್ತಿತ್ತು. ಯಥಾಪ್ರಕಾರ ನಮ್ಮ ಮುಂದಾಳುಗಳು ಇದೊಂದನ್ನು ಹತ್ತಿದರೆ ಮುಗಿಯಿತು ಎಂದು ಎರಡು ಮೂರು ಶಿಖರಗಳನ್ನು ಹತ್ತಿಸಿ ಒಳಗೊಳಗೇ ನಗುತ್ತಿದ್ದರು. ಎಲ್ಲರ ಕಾಲುಗಳು ಕಠಿಣವಾದ ಮುಷ್ಕರಕ್ಕೆ ತಯಾರಾಗುತ್ತಿದ್ದವು. ನೋಡ ನೋಡುತ್ತಿದ್ದಂತೆ ಸೂರ್ಯ ಮೇಲೆ ಬಂದು ಸುತ್ತ ಇದ್ದ ರಾಶಿ ರಾಶಿ ಪರ್ವತಗಳ ಮೇಲಿದ್ದ ಹಿಮಕ್ಕೆ ಸಾಣೆ ಹಿಡಿದ. ಅಂತೂ ಕೊನೆಯ ಶಿಖರ ತಲುಪಿ ಸುತ್ತ ಕಣ್ಣಾಡಿಸಿದರೆ ಎತ್ತ ನೋಡಿದರೂ ಶಿಖರಗಳು, ಹಿಮರಾಶಿ! ನಮ್ಮ ಜೊತೆಗೆ ಬಂದಿದ್ದ ಸ್ಥಳೀಕ ಪವಾರ್ ತನ್ನ ಘಡವಾಲೀ ಭಾಷೆಯ ಸೊಗಡಿನಲ್ಲಿ ಸುತ್ತಲಿನ ಪರ್ವತ ಶಿಖರಗಳ ಹೆಸರುಗಳನ್ನು ಬೆರಳ ತುದಿಗೆ ಸಿಕ್ಕಿಸಿಕೊಂಡು ಆಯಾ ಪರ್ವತಗಳಿಗೆ ಅಂಟಿಸಿದ!

ಸ್ವರ್ಗಾರೋಹಿಣಿ, ಪುಲಾರಾ ರಿಡ್ಜ್, ರೂಪಿನ್ ಸೂಪಿನ್ ವ್ಯಾಲಿ, ಯಮುನೋತ್ರಿ ಗಂಗೋತ್ರಿ ಗ್ಲೇಷಿಯರ್, ಹರ್ ಕಿ ಧುನ್, ಬರಾಟ್ಸರ್, ಮುಂತಾದುವುಗಳನ್ನು ತೋರಿಸಿದ ಮೇಲೆ ಸ್ವರ್ಗಾರೋಹಿಣಿ ಎಂಬ ಐದು ಶಿಖರಗಳ ಗುಚ್ಛವನ್ನು ಮತ್ತೊಮ್ಮೆ ತೋರಿಸಿ ಪಂಚಪಾಂಡವರು ಸ್ವರ್ಗಕ್ಕೆ ಹೋಗಿದ್ದು ಇದರ ಮೂಲಕವೇ ಎಂದು ಆವಾಗ ತಾನೇ ಎದುರಿಗೆ ಇದ್ದೆ ಎನ್ನುವಂತೆ ಹೇಳಿದ! ಯಾವುದಾದರೂ ಐದರ ಒಂದು ಗುಂಪು ಕಂಡಾಕ್ಷಣ ಭಾರತದ ಮನಸ್ಸಿಗೆ ತಕ್ಷಣ ಗೋಚರವಾಗುವುದು ಪಂಚಪಾಂಡವರು. ಹಾಗಾಗಿ ಈ ಐದು ಶಿಖರಗಳ ಗುಚ್ಛವೂ ಅವರಿಗೇ ಸಂದಾಯವಾಗಿದೆ.

ಹಸಿವೋ ದಣಿವೋ ಗೊತ್ತಾಗದ ಹಾಗಾಗಿದ್ದ ನಮಗೆ ತಂದಿದ್ದ ಗೋಧಿ ಹುಗ್ಗಿ ಅಮೃತಸಮಾನವಾಗಿತ್ತು. ಸ್ವಲ್ಪ ಹೊತ್ತು ಅಲ್ಲಿ ನಿಂತು ಇಲ್ಲಿ ಕುಳಿತು ತಮ್ಮ ತಮ್ಮ ಪೀಠಗಳನ್ನು ಗುರುತಿಸಿಕೊಂಡು ಫೋಟೊ ತೆಗೆಯುವ ತೆಗೆಸಿಕೊಳ್ಳುವ ಹಲವಾಟ ನಡೆಯಿತು. ಹಿಮಾಲಯದ ತುದಿಯಲ್ಲಿ ನಿಂತರೂ ನಮ್ಮನ್ನು ನಾವು ನೋಡಿಕೊಳ್ಳುವ ಈ ಹಂಬಲದಿಂದ ಅಷ್ಟು ಸುಲಭ ಮುಕ್ತಿ ಇಲ್ಲ. ಈ ನಡುವೆ ಮಾತನಾಡಿದಾಗ ನಾನು ತೊದಲುತ್ತ ಮಾತನಾಡುತ್ತಿರುವುದು ಗಮನಕ್ಕೆ ಬಂತು. ಯಾಕಿರಬಹುದು ಎಂದು ತಲೆ ಕೆಡಿಸಿಕೊಂಡೆ. ಸ್ವಲ್ಪ ಹೊತ್ತಿಗೆ ನಾಲಿಗೆ ನಿಯಂತ್ರಣಕ್ಕೆ ಬಂತು. ಆಮೇಲೆ ಇದೇ ಅನುಭವ ಅನೇಕರಿಗೆ ಆಗಿದೆ ಎಂದು ತಿಳಿದ ಮೇಲೆ ಸಮಾಧಾನವಾಯಿತು.

## ಉರುಳುಸೇವೆ

ಶಿಖರದಿಂದ ಕೆಳಗಿಳಿಯಲು ಬೇರೆ ದಾರಿ ಇದೆ, ಅದು ಸುಲಭದ ದಾರಿ ಎಂದು ನಮ್ಮ ಮುಂದಾಳುಗಳು ಹೇಳಿದಾಗ ಅವರ ಮಾತನ್ನು ಇಡಿಯಾಗಿ ನಂಬುವ ಸ್ಥಿತಿಯಲ್ಲಿ ನಾವು ಇರಲಿಲ್ಲ. ಇಡೀ ಬೆಟ್ಟವನ್ನು ಕವುಚಿಕೊಂಡಿದ್ದ ಹಿಮದ ಹಾಸಿಗೆಯ ಎದುರಿಗೆ ನಮ್ಮನ್ನು ನಿಲ್ಲಿಸಿದ ಸ್ಥಳೀಯ ಮಾರ್ಗದರ್ಶಿಗಳಾದ ರಾಣಾ ಮತ್ತು ಪವಾರ್ ಬೆಟ್ಟ ಇಳಿಸಲು ಅವರ ಮಟ್ಟಿಗೆ ಸುಲಭದ ದಾರಿಯೊಂದನ್ನು ಕಂಡುಕೊಂಡಿದ್ದರು. ನಮ್ಮ ಶೂಗಳ ಸುತ್ತ ಕಟ್ಟಿಕೊಳ್ಳಲು ಪಟ್ಟಿಯೊಂದನ್ನು ಕೊಟ್ಟು ಸುತ್ತಿಸಿದರು. ಆಮೇಲೆ ಒಬ್ಬೊಬ್ಬರನ್ನು ಹಿಮದ ಮೇಲೆ ಕೂರಿಸಿ ವೇಗವೇನಾದರೂ ಜಾಸ್ತಿ ಆದರೆ ಮಲಗಲು ಹೇಳಿ ನಿಷ್ಕರುಣೆಯಿಂದ ನೂಕಿದರು. ನಮ್ಮನ್ನು ಆಯ್ದುಕೊಳ್ಳಲು ಕೆಳಗೆ ರಾಣಾ ನಿಂತಿದ್ದರು. ಒಬ್ಬೊಬ್ಬರೂ ಅವರದೇ ರೀತಿಯಲ್ಲಿ ಅವರವರ ತೂಕಕ್ಕೆ ತಕ್ಕಂತೆ ಅಡ್ಡಡ್ಡ ಉದ್ದುದ್ದ ಉರುಳುತ್ತ ರಾಣಾನ ಪಾದ ತಲುಪಿದರು. ಅಲ್ಲಿಂದ ಮತ್ತೆ ಇನ್ನೊಂದು ಉರುಳು! ಮತ್ತೊಮ್ಮೆ ಅದೇ ಉರುಳುಸೇವೆ! ಅಂತೂ ಈ ದಿಂಡುರುಳಿನ ನಂತರ ಹಿಮರಾಶಿಯ ಬುಡಕ್ಕೆ ತಲುಪಿದೆವು. ನಂತರ ನಮ್ಮ ಬೇಸ್ ಕ್ಯಾಂಪಿಗೆ ಮರುಪ್ರಯಾಣ. ಮಧ್ಯಾಹ್ನ ಒಂದರ ಹೊತ್ತಿಗೆ ಹಿಂದಿರುಗಿದ ನಮಗೆ ಯಾರಿಗೂ ಕಾಲುಗಳ ಮೇಲಿನ ನಿಯಂತ್ರಣ ಉಳಿದಿರಲಿಲ್ಲ. ಮಧ್ಯಾಹ್ನದ ಊಟವಾದ ಮೇಲೆ ಮತ್ತೆ ಇನ್ನೂ ಒಂದೆರಡು ಕಿಲೋಮೀಟರಿನ ಪ್ರಯಾಣ ಇದೆಯೆಂದೂ ಹರ್‌ಗಾಂವ್ ಎಂಬಲ್ಲಿನ ಇನ್ನೊಂದು ತಂಗುದಾಣಕ್ಕೆ ಸಂಜೆಯ ಒಳಗೆ ತಲುಪಬೇಕೆಂದೂ ಅಪ್ಪಣೆ ಆಯಿತು. ಒಲ್ಲದ ಮನಸ್ಸಿನಿಂದ ಹರ್‌ಗಾಂವ್ ತಲುಪಿದಾಗ ಸಂಜೆ ಐದು ಗಂಟೆ. ಏಳಕ್ಕೇ ಊಟ ಮುಗಿಸಿ ನಮ್ಮ ನಮ್ಮ ಗುಹೆಗಳನ್ನು ಸೇರಿಕೊಂಡೆವು. ಮರ್ರೋ ಎಂದು ಚಳಿಗಾಳಿ ರುಬ್ಬುತ್ತಿತ್ತು. ಬೆಳಗಿನವರೆಗೆ ಯಾರೂ ಹೊರಗೆ ಇಣುಕಲಿಲ್ಲ.

ಮರುದಿನ ಸಾಂಕ್ರಿಗೆ ನಾಲ್ಕು ತಾಸಿನ ಪ್ರಯಾಣ. ಶಿಖರ ಏರಿಬಂದ ಸಾರ್ಥಕತೆ ಮನಸ್ಸು ದೇಹಗಳನ್ನು ತುಂಬಿದ್ದರೂ ಅದಕ್ಕೆ ಮಾತು ನೀಡುವ ಚೈತನ್ಯ ಉಳಿದ ಹಾಗೆ ಕಾಣಲಿಲ್ಲ. ಹರ್‌ಗಾಂವ್‌ನಿಂದ ಹಿಂದಿರುಗುತ್ತಿದ್ದಾಗ ಎದುರಿಗೆ ಸಿಕ್ಕಿದ್ದ ಒಂದು ಸ್ಥಳೀಯ ಕುಟುಂಬದ ಎರಡು ಪುಟ್ಟ ಮಕ್ಕಳು ಮತ್ತು ಇಬ್ಬರು ಹೆಂಗಸರು ಬೆಟ್ಟದ ತುದಿಯಲ್ಲಿರುವ ಗುಡಿಗೆ ಹೋಗಿ ಬರುವುದಾಗಿ ಹೋಗಿದ್ದರು. ನಾವು ಸಾಂಕ್ರಿ ತಲುಪುವ ಹೊತ್ತಿಗೆ ವಾಪಸ್ಸಾಗಿ ನಮ್ಮೆದುರೇ ನಮ್ಮನ್ನು ದಾಟಿ ಮುಂದೆ ಹೋದರು! ಹಿಮಾಲಯವೆಂದರೆ ಅತ್ಯಂತ ಸರಳ, ನಿರಾಳ, ನಿಚ್ಚಳ ಮತ್ತು ಅರ್ಪಿಸಿಕೊಂಡವರಿಗೆ ತಾಯಿಮಡಿಲು!

ಬೆಟ್ಟವನ್ನು ಹತ್ತಿದೆವೆನ್ನಲಾಗದು. ಬೆಟ್ಟಕ್ಕೆ ಅರ್ಪಿಸಿಕೊಂಡೆವೆನ್ನುವುದೇ ಸೂಕ್ತವಾದುದು. ಕೇದಾರಕಂಠಕ್ಕೆ ನೀವು ಕೂಡ ಒಮ್ಮೆ ಹೋಗಿ ಅರ್ಪಿಸಿಕೊಂಡು ಬನ್ನಿ.

ಪ್ರತಿಕ್ರಿಯಿಸಿ: feedback@sudha.co.in